ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜ್‌ರವರ ಕೋರ್ಟಿನಲ್ಲಿ.

1887ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 264.

ಮೃತಪಟ್ಟ ಶಿವರಂ ರಾಮಸ್ವಾಮಿಮೊದಲಿಯಾರ್ರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ರತ್ನಮ್ಮಾಳ್, ಮೃತಪಟ್ಟ ಸದರೀ ರಾಮಸ್ವಾಮಿಮೊದಲಿಯಾರ್ರಿಗೆ ಹೆಂಡತಿ ಆಗಬೇಕೆಂಬ ಹಕ್ಕು ದಾರೀ ಮೇಲೆ ಬೆಂಗಳೂರು ಸ್ಥಳದ ರತ್ನಮ್ಮಾಳ್ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ರಾಮಸ್ವಾಮಿ ಮೊದಲಿಯಾರ್ರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ರತ್ನಮ್ಮಾಳ್ ಅರ್ಜಿಯನ್ನು 1887ನೇ ಇಸವಿ ಮೇ ತಿಂಗಳು ತಾರೀಖು 27ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಸ್ವಾಮಿಮೊದಲಿಯಾರ್ರ ಆಸ್ತಿಗೆ ಹಕ್ಕು ದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಮಾರ್ಚೀ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1887ನೇ ಇಸವಿ ಮಿ॥ ಅರ್ಜೀ ನಂಬರ್ 269.

ಮೃತಪಟ್ಟ ಚಿನ್ನಮ್ಮ ಚೆನ್ನಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಬೆಂಗಳೂರು ಅರಳೇಪೇಟೆ ರಾಮಪ್ಪನ ಮಗ ದೊಮ್ಮಸಂದ್ರದ ನಾರಣಪ್ಪ ಮೃತಪಟ್ಟ ಸದರೀ ಚಿನ್ನಮ್ಮ ಚೆನ್ನಪ್ಪನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ಸ್ಥಳದ ನಾರಣಪ್ಪನು ದೊಮ್ಮಸಂದ್ರದ ವಾಸಸ್ಥನಾಗಿ ಮೃತಪಟ್ಟ ಚಿನ್ನಮ್ಮ ಚೆನ್ನಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೆ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ನಾರಣಪ್ಪನ ಅರ್ಜೀಯನ್ನು 1887ನೇ ಇಸವಿ ಮೇ ತಿಂಗಳು ತಾರೀಖು 26ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ಚಿನ್ನಮ್ಮ ಚೆನ್ನಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಮಾರ್ಚೀ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕೈಸ್,
ಸಬ್ ಜಡ್ಜ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 14ನೇ ಮಾರ್ಚೀ 1887.

ಇದರಿಂದ ತಿಳಿಯಪಡಿಸುವದೇನಂದರೆ, ಕೋಲಾರ ಡಿಸ್ಟ್ರಿಕ್ಟು ಬವರಿಂಗ್‌ಪೇಟೆ ತಾಲ್ಲೂಕಿಗೆ ಶೇರಿದ ಕಾಮಸಂದ್ರದ ಜಂಗಲ್‌ನಲ್ಲಿ ಬಂದು ಅಥವಾ ಎರಡು ವರುಷಗಳ ವರಿಗೆ ಸಾದೆ ಕಡದುಕೊಳ್ಳುವ ಹಕ್ಕನ್ನು ಅಪೇಕ್ಷಿಸತಕ್ಕವರಿಂದ ಬರುವ ಮೊಹರ್ಕಾಡಿದ ದರಖಾಸ್ತುಗಳನ್ನು ಕೋಲಾರ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಸಾಹೇಬರವರು 1887ನೇ ಇಸವಿ ಏಪ್ರಿಲ್ 20ನೇ ತಾರೀಖಿನವರಿಗೆ ತೆಗದುಕ್ಕೊಳ್ಳುವರು:—

2. ಈ ಜಂಗಲ್‌ನಿಂದ ಸಾಗಿಸಲ್ಪಡುವ ಕತ್ತರಿಸದೇ ಇರುವ ಸಾದೆಯ ಅಥವಾ ಸಣ್ಣ ಸಣ್ಣ ಗುಂಡುಗಳಾಗಿ ಕೊಯಿದು, ಯಾ ಕತ್ತರಿಸಿ ಇರುವ ಸಾದೆಯ ಭಂಡಿ ಬೋಜಾ ವೊಂದಕ್ಕಾಗಲಿ ಅಥವಾ 68 ಘನ ಅಡಿಗಳುಳ್ಳ ಟರ್ ಬಂವಕ್ಕಾಗಲಿ ಆಯಾ ದರಖಾಸ್ತುದಾರರು ಕೊಡಲು ವೊಪ್ಪುವ ಕೇನಿಯರೇಜ್ ತೀರ್ವೆಯ ದರವನ್ನು ಅವರವರ ದರಖಾಸ್ತಿನಲ್ಲಿ ನಮೂದಿಸಿ ಇರಬೇಕು. ನಗದು ಅಥವಾ ನೋಟು ಮೂಲಕ (100) ರೂಪಾಯಿಗಳ ಡಿಪಾಜಿಟ್ ವೊಬಲಗಿನ ಸಮೇತ ಬಾರದೆ ಇರುವ ದರಖಾಸ್ತುಗಳು ತೆಗದುಕೊಳ್ಳಲ್ಪಡುವದಿಲ್ಲ. ಈ ಕಂಟ್ರಾಕ್ಟಿನಲ್ಲಿ ಸಾಧಾರಣವಾಗಿರುವ ಎರಡು ಭಂಡಿ ಬೋಜಾಗಳು ವೊಂದು ಟರ್ ಯಂದು ಎಣಿಸಲ್ಪಡುವದು.

3. ಜಂಗಲ್‌ನಲ್ಲಿ ಯಾವ ಪ್ರದೇಶದಲ್ಲಿ ಮರಕಡಿಯತಕ್ಕದ್ದೋ ಅದನ್ನು ಕಡಿಯುತಕ್ಕ ಮರಗಳನ್ನು ಸಹ ಫಾರೆಸ್ಟ್ ಇಲಾಖೆಯವರು ಗುರ್ತು ಮಾಡುತ್ತಾರೆ, ಹಾಗೆ ಗುರ್ತು ಮಾಡಲ್ಪಟ್ಟ ಮರಗಳನ್ನು ಮಾತ್ರ ಕಂಟ್ರಾಕ್ಟುದಾರನು ಫಾರೆಸ್ಟ್ ಇಲಾಖೆಯವರು ನೇಮಿಸುವ ರೀತಿಯಲ್ಲಿ ಕಡದುಕೊಳ್ಳುವದಕ್ಕೂ ಮತ್ತು ತಿಂಗಳು ಬಂದಕ್ಕೆ 400 ಟ್ಯ ಅಥವಾ ವರುಷ ಬಂದಕ್ಕೆ 4,800 ಟ್ಯಗಿಂತ ಹೆಚ್ಚಾಗಿ ಸಾದೆಯನ್ನು ಕಡಿದು ಸಾಗಿಸದೆ ಇರುವದಕ್ಕೂ ಬದ್ಧನಾಗಿ ಮುಚ್ಚಲಿಕೆ ಬರದುಕೊಡಬೇಕು. ಈ ಷರತ್ತುಗಳಿಗೆ ತಪ್ಪಿದರೆ ಸರ್ಕಾರದವರು ಗೊತ್ತು ಮಾಡುವ ಜುರ್ಮಾನೆ ತೆರಲಿಕ್ಕೆ ಗುರಿಯಾಗಿರುವದಾಗಿ ಸದರೀ ಮುಚ್ಚಲಿಕೆಯಲ್ಲಿ ನಮೂದಿಸಬೇಕು. ಬೆಳಿಸಿಕೊಳ್ಳಲ್ಪಟ್ಟು ಇರುವ ಜಾತಿ ಮರಗಳನ್ನು ಫಲವೃಕ್ಷಗಳನ್ನು ಅಥವಾ ಇತರ ಜಿನಸಿ ಹುಟ್ಟುವಳಿಯಾಗತಕ್ಕ ಮರಗಳನ್ನು ಕಡಿಯಕೂಡದು, ಮತ್ತು ಅವುಗಳ ರೆಂಬೆಗಳನ್ನು ಸವರಲೂ ಕೂಡದು.

4. ಕಂಟ್ರಾಕ್ಟುದಾರನು ಸಾದೆಯನ್ನು ಭಂಡಿಗಳಿಗೆ ಭರ್ತೀಮಾಡಿಕೊಂಡು ಹೋಗಿ ಭಂಗಾರದ ಗಣಿಯವರಿಗೆ ಟ್ಯ ವೊಂದಕ್ಕೆ ಏಳು ರೂಪಾಯಿಗಳಿಗೆ ಜಾಸ್ತಿ ಇಲ್ಲದ ದರಪ್ರಕಾರ ಬಿಕರೀ ಮಾಡತಕ್ಕದ್ದು. ಇವನು ತರುವ ಸಾದೆಯು ಯಲ್ಲಾ ಗಣಿಯವರಿಗೂ ಏಕಾಗುವದಕ್ಕಿಂತ ಜಾಸ್ತಿಯಾಗಿದ್ದು ಅದು ಅವರಿಗೆ ಅವಶ್ಯಕವಿಲ್ಲದ ಪಕ್ಷದಲ್ಲಿ ಹಾಗೆ ಬೆಳಿಯುವ ಸಾದೆಯನ್ನು ಅವನು ಮತ್ತೆಲ್ಯಾದರೂ ಯಾವ ದರದ ಪ್ರಕಾರವಾದರೂ ಮಾರಿಕೊಳ್ಳಬಹುದು.

5. ಈ ವಿಷಯದಲ್ಲಿ ಮೇಲೆ ನಮೂದಾಗುವದಕ್ಕಿಂತ ಹೆಚ್ಚು ತಪಸೀಲುಗಳು ತಿಳಿಯಬೇಕಾಗಿ ಇದ್ದಲ್ಲಿ ಅವುಗಳನ್ನೂ ಕಂಟ್ರಾಕ್ಟಿನ ಷರತ್ತುಗಳನ್ನೂ ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಆಫೀಸಿನಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

6. ಮೊಹರ್ಕಾಡಿದ ದರಖಾಸ್ತುಗಳನ್ನು ಸ್ಯ 1887ನೇ ಇಸವಿ ಏಪ್ರೆಲ್ 20ನೇ ತಾರೀಖು ಮಧ್ಯಾನ್ನ 12 ಘಂಟೆಗೆ ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಆಫೀಸಿನಲ್ಲಿ ಡೆಪ್ಯುಟಿ ಕಮ್ಮಿಷನರವರಾಗಲಿ ಅಥವಾ ಅವರು ನೇಮಿಸುವ ಇತರ ಆಫೀಸರರಾಗಲಿ ಆಗ್ಯೆ ಹಾಜರಿರುವ ದರಖಾಸ್ತುದಾರರ ಸಮಕ್ಷಮ ವೊಡೆದು ನೋಡುವರು.

7. ಡೆಪ್ಯುಟಿ ಕಮ್ಮಿಷನರವರು ಕಾರಣ ನಮೂದಿಸದೆ ಯಾವ ದರಖಾಸ್ತನ್ನಾದರೂ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ತಮ್ಮಲ್ಲಿ ಬೆಳಿಸಿಕೊಂಡು ಇದ್ದಾರೆ.

8. ಯಾವ ಮನುಷ್ಯನ ದರಖಾಸ್ತು ಅಂಗೀಕರಿಸಲ್ಪಡುವದೋ ಅವನ ಡಿಪಾಜಿಟ್ ವೊಬಲಗು ನಿಲ್ಲಿಸಿಕ್ಕೊಳ್ಳಲ್ಪಡುವದು. ಅಂಥಾ ದರಖಾಸ್ತುದಾರನ ದರಖಾಸ್ತು ಮಂಜೂರಾದ ಸಂಗತಿ ಅವನಿಗೆ ತಿಳಿಸಲ್ಪಟ್ಟ (10) ದಿವಸಗಳ ಬೆಳಗಾಗಿ ಸರಿಯಾದ ಸ್ಟ್ಯಾಂಪು ಕಾಗದ್ದಲ್ಲಿ ಸದರೀಯವನು ಅವಶ್ಯಕವಾದ ಮುಚ್ಚಲಿಕೆ ಬರದು ಕೊಡಬೇಕು ಮತ್ತು ಕಂಟ್ರಾಕ್ಟು ಷರತ್ತುಗಳ ಪ್ರಕಾರ ಕ್ರಮವಾಗಿ ನಡದುಕೊಳ್ಳಲು ಜಾಮೀನು ತರೀಕ್ ನಗದು 500 ರೂಪಾಯಿ ಠೇವಣಿ ಇಡಬೇಕು, ಇದಕ್ಕೆ ತಪ್ಪಿದರೆ ಅವನ ಡಿಪಾಜಿಟ್ ವೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು.

9. ದರಖಾಸ್ತುದಾರರು ತಾವು ಕಳುಹಿಸುವ ದರಖಾಸ್ತುಗಳ ಮೇಲೆ "ಕಾವುಸಂದ್ರದ ಜಂಗಲ್‌ನಿಂದ ಸಾದೆ ಕಡದು ತರುವ ಹಕ್ಕಿಗೋಸ್ಕರ ಕಳುಹಿಸಲ್ಪಟ್ಟ ದರಖಾಸ್ತು" ಎಂದು ಬರಿಯಬೇಕು.

ತಾರೀಖು 17ನೇ ಮಾರ್ಚೀ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸ್ಯ 1887—88ನೇ ಇಸವಿ ಸರ್ವಜಿತು ಸಂವತ್ಸರಕ್ಕೆ ಕೋಲಾರ ಡಿಸ್ಟ್ರಿಕ್ಟು ಗೋರೀಬಿದನೂರು ತಾಲ್ಲೂಕು ಸರ್ಕಾರ ಬಂಜರ್ ಜಮೀನುಗಳಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳತಕ್ಕ ಹಕ್ಕು ಕೋಲಾರ ಡಿಸ್ಟ್ರಿಕ್ಟು ಆಫೀಸಿನಲ್ಲಿ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಯಾ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಸಾಹೇಬರವರ ರೂಬರೂ 1887ನೇ ಇಸವಿ ಏಪ್ರೆಲ್ 21ನೇ ತಾರೀಖಿನಲ್ಲಿ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ಈ ಹರಾಜು ಸದರೀ ತಾರೀಖು ದಿವಿ 12 ಘಂಟೆಗೆ ಷುರೂ ಆಗುತ್ತೆ.

2. ಹರಾಜು ಪೂರೈಸಿದ ವಡನೆ ಚಡ ಸವಾಲ್‌ದಾರನು ಹರಾಜು ವೊಬಲಗಿಗೆ ಶೇಕಡಾ 25 ರೂಪಾಯಿ ಮೇರಿಗೆ ಠೇವಣಿ ಯಿಡಬೇಕು, ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿಯು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಿಂದ ತಿಳಿಸಲ್ಪಟ್ಟ 7 ದಿವಸಗಳ ಬೆಳಗಾಗಿ ಬಾಕೀ ವೊಬಲಗು ಮತ್ತು ಪೂರಾ ವೊಬಲಗ್ಯೆ ರೂಪಾಯಿ 1ಕ್ಕೆ 1 ಆಣೆ ಪ್ರಕಾರ ಲೋಕಲ್‌ಸೆಸ್ ಸಹಾ ಪಾವತೀ ಮಾಡಬೇಕು. ಹಾಗೆ ಪಾವತೀ ಮಾಡದೇ ಯಿದ್ದರೆ ಠೇವಣಿ ಯಿಟ್ಟ ವೊಬಲಗು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದು. ಮೇಲ್ಕಂಡ ಠೇವಣಿ ವೊಬಲಗು ಯಿಡುವದಕ್ಕೆ ತಪ್ಪಿದರೂ ಅಥವಾ ಬಾಕೀ ವೊಬಲಗನ್ನ ಪಾವತೀ ಮಾಡುವದಕ್ಕೆ ತಪ್ಪಿದರೂ ಹಕ್ಕು ಪುನಹ ಹರಾಜುಮಾಡಲ್ಪಡುವದು ಲುಕ್ಸಾನ್ ವೊಬಲಗು ತಪ್ಪಿದ ಚಡ ಸವಾಲ್‌ದಾರನಿಂದಲೇ ವಸೂಲ್ಮಾಡಲ್ಪಡುವದು.

3. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮಿಗೋಸ್ಕರ ಸವಾಲ್ ಮಾಡುತ್ತಾರೆಯೇ ಅಥವಾ ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುತ್ತಾರೆಯೆ ತಿಳಿಸಬೇಕು. ಇತರರ ಯೇಜಂಟುಗಳಾಗಿ ಸವಾಲ್ ಮಾಡುವವರಾಗಿ ಯಿದ್ದರೆ ಅವರಿಂದ ರುಜು ಮಾಡಲ್ಪಟ್ಟ ಮೊ ಖ್ತ್ಯಾರ್‌ನಾಮೆಯನ್ನ ಹಾಜರ್ಮಾಡಬೇಕು, ಹಾಗೆ ಹಾಜರ್ಮಾಡದೆ ಇದ್ದರೆ ಅಂಥಾವರ ಸವಾಲಗಳು ತಿರಸ್ಕರಿಸಲ್ಪಡುವದು.

ಈ ಹರಾಜು ದಿವಾನ್ ಸ್ಟಾಪೇಬರವರ ಮಂಜೂರಾತಿಗೆ ವಳಪಟ್ಟು ಯಿರುತ್ತೆ.

ಸಿ. ಸುಬ್ಬರಾವ್,
ಡೆಪ್ಯೂಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 117.

ಮೃತಪಟ್ಟ ಪುಟ್ಟಮ್ಮನವರ ಆಸ್ತೀ ವಿಷಯದಲ್ಲಿ:—

ಅರ್ಜೀದಾರ ರಾಮಸ್ವಾಮಯ್ಯನವರು, ಮೃತಪಟ್ಟ ಸದರೀ ಪುಟ್ಟಮ್ಮನವರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಹುಣಸೂರು ತಾಲ್ಲೂಕು ಬೆಟ್ಟದಪುರದ ಸ್ಥಳದ ಸದರೀ ರಾಮಸ್ವಾಮಯ್ಯನವರು ಅರಕಲ್‌ಗೂಡು ತಾಲ್ಲೂಕು ಮಲ್ಲದಾಸಪಾಳ್ಯದಲ್ಲಿ ವಾಸಸ್ಥರಾಗಿದ್ದು ಮೃತಪಟ್ಟ ಪುಟ್ಟಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್‌ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಾಮಸ್ವಾಮಯ್ಯನವರ ಅರ್ಜೀಯನ್ನ 1887ನೇ ಇಸವಿ ಏಪ್ರೆಲ್ ತಿಂಗಳು ತಾರೀಖು 5ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪುಟ್ಟಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಅರ್ಜೀ ನಂಬರ್ 118.

ಮೃತಪಟ್ಟ ನಾಗಂಣನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಪದ್ಮರಾಜಯ್ಯನವರು, ಮೃತಪಟ್ಟ ಸದರೀ ನಾಗಂಣನವರಿಗೆ ಸಹೋದರ ಆಗಬೇಕೆಂಬ ಹಕ್ಕುದಾರಿ ಮೇಲೆ ಸಾಲಿಗ್ರಾಮದ ಸ್ಥಳದ ಸದರೀ ಪದ್ಮರಾಜಯ್ಯನವರು ಸದರೀ ವಾಸಸ್ಥರಾಗಿ ಮೃತಪಟ್ಟ ನಾಗಂಣನವರ ಜಿಂದಗಿ ಬಗ್ಯಾಗಿ ಬರತಕ್ಕ 900 ರೂಪಾಯಿಸಾಲವನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟುಮೇರಿಗೆ ಸರಟಿಫಿಕೇಟ್ ಬಗ್ಯೆಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪದ್ಮರಾಜಯ್ಯನವರ ಅರ್ಜೀಯನ್ನು 1887ನೇ ಇಸವಿ ಏಪ್ರೆಲ್ ತಿಂಗಳು ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾಗಂಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಅರ್ಜೀ ನಂಬರ್ 119.

ಮೃತಪಟ್ಟ ಗುಂಡಪ್ಪನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಶಾಂತಮ್ಮನವರು ಮೃತಪಟ್ಟ ಸದರೀ ಗುಂಡಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಲಷ್ಕರ್ ಮೊಹಲಾ ಸ್ಥಳದ ಸದರೀ ಶಾಂತಮ್ಮನವರು ಸದರೀ ವಾಸಸ್ಥರಾಗಿ ಮೃತಪಟ್ಟ ಗುಂಡಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 900 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್‌ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಾಂತಮ್ಮನವರ ಅರ್ಜಿಯನ್ನು 1887ನೇ ಇಸವಿ ಏಪ್ರೆಲ್ ತಿಂಗಳು ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗುಂಡಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಮಾರ್ಚೀ ತಿಂಗಳು 7ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.